

ಎಸ್.ಎಫ್. ಯೋಗಪ್ಪನವರ್

ಚಂದ್ರಲೋಕದಲ್ಲಿ ಗಗನ ಯಾತ್ರಿಗಳು ಎತ್ತಿಡುವ ಕಾಲುಗಳಂತಾಗುತ್ತವೆ. ಸಾವಕಾಶವಾಗಿ ಒಂದೊಂದೇ ಹೆಜ್ಜೆಯನ್ನು ಗೆದ್ದಂತೆ ಇಡುತ್ತ ಸಾಗಬೇಕು. ಸಾಕಷ್ಟು ನೀರು ಕುಡಿದರು ಹೊರಡುವ ವೇಳೆಗೆ ಮತ್ತೆ ಬಾಯಾರಿಕೆಯಾಗುತ್ತದೆ. ಮತ್ತೆ ಮತ್ತೆ ನೀರು ಮುಕ್ಕಳಿಸಬೇಕು. ನಾಲಿಗೆ ತೇವಗೊಳಿಸಬೇಕು.

ಇತ್ತೀಚಿಗೆ ಮರಿಯಪ್ಪನಿಗೆ ಹೆಂಡತಿ ಮಕ್ಕಳ ಮೇಲಿನ ಒಲವು ಕಡಿಮೆಯಾಗಿತ್ತು. ಯಾರ ಮೇಲೆಯೂ ವಿಶ್ವಾಸ ಉಳಿದಿರಲಿಲ್ಲ. ಎಲ್ಲರೂ ಒಂದಿಲ್ಲ ಒಂದು ರೀತಿಯಲ್ಲಿ ತಮ್ಮ ತಮ್ಮ ಸ್ವಾರ್ಥಕ್ಕಾಗಿ ಶೋಷಣೆ ಮಾಡುವವರೇ ಎನ್ನುವ ತೀರ್ಮಾನಕ್ಕೆ ಬಂದಿದ್ದ. ತನ್ನ ಗ್ರಾಮದಿಂದ ಬೆಂಗಳೂರಿಗೆ ಬಂದದ್ದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿದ್ದ, ಮಕ್ಕಳ ಉದ್ಧಾರಕ್ಕಾಗಿ ಬೆಂಗಳೂರು ಸೇರಿ, ಬೇರು ಸಡಿಲಾದ ಮರದಂತೆ ಚಡಪಡಿಸುತ್ತಿದ್ದ. ವಾಯುವಿಹಾರಕ್ಕೆ ಹೋಗುವ ಮೊದಲು ವಾಲೆಟ್ ಜತನವಾಗಿ ತನ್ನ ಕಿಸೆಯಲ್ಲಿ ಇಟ್ಟುಕೊಳ್ಳುತ್ತಿದ್ದ. ಆ ವಾಲೆಟ್‌ನಲ್ಲಿ ಬ್ಯಾಂಕಿನ ಎಲ್ಲಾ ಎ.ಟಿ.ಎಂ. ಕಾರ್ಡ್‌ಗಳು, ಆಧಾರ್, ಪ್ಯಾನ್, ಸೀನಿಯರ್ ಸಿಟಿಜನ್ ಗುರುತಿನ ಚೀಟಿ, ಇನ್ನೂ ಹಲವಾರು ಮುಖ್ಯ ಚೀಟಿಗಳು ಅದರಲ್ಲಿರುತ್ತಿದ್ದವು. ತನ್ನ ವ್ಯಕ್ತಿಗತ ಕೈಕಾಸಿನ ಹಣವನ್ನು ತನ್ನ ಮತ್ತೊಂದು ಕಿಸೆಯಲ್ಲಿ ಇಟ್ಟುಕೊಳ್ಳುತ್ತಿದ್ದ. ಮನೆಯಲ್ಲಿಯೂ ಕೂಡ ತನ್ನ ಹಣವನ್ನು ದೇವರ ಸರ್ಪದಂತೆ ತಾನೇ ಕಾಯುತ್ತಿದ್ದ. ಮುಖ್ಯವಾದ ಕೆಲವು ಕೀಲಿಕೈಗಳನ್ನು ಪೈಜಾಮಿನ ಕಿಸೆಯಲ್ಲಿ ಇಟ್ಟುಕೊಳ್ಳುತ್ತಿದ್ದ. ಇತ್ತೀಚಿಗೆ ತನ್ನ ಹೆಂಡತಿಯ ಹಾಗೂ ಮಕ್ಕಳ ಫೋನ್ ನಂಬರುಗಳು ಕೂಡ ನೆನಪು ಹಾರಿದ್ದವು. ಎ.ಟಿ.ಎಂ. ಕಾರ್ಡ್‌ಗಳ ಪಾಸ್‌ವರ್ಡ್ ನಂಬರುಗಳು ನೆನಪಿಗೆ ಬರುತ್ತಿರಲಿಲ್ಲ. ಎಲ್ಲವನ್ನೂ ಒಂದು ಸಣ್ಣ ಚೀಟಿಯಲ್ಲಿ ಬರೆದುಕೊಂಡು ಇಟ್ಟಿದ್ದ. ವಾಯುವಿಹಾರಕ್ಕೆ ಹೋಗುವ ಮೊದಲು ಈ ಎಲ್ಲವನ್ನು ಮತ್ತೆ ಮತ್ತೆ ಸ್ಪರ್ಶಿಸಿ ಪರೀಕ್ಷಿಸಿಕೊಂಡು ಹೊರಹೋಗುತ್ತಿದ್ದ.

ಮರಿಯಪ್ಪನಿಗೆ ಮನೆಯಿಂದ ಆರ್.ವಿ.ಎನ್ ಆಟದ ಮೈದಾನದ ಗೇಟಿಗೆ ಹೋಗಬೇಕಾದರೆ ಮಧ್ಯದಲ್ಲಿಯ ದೊಡ್ಡರಸ್ತೆಯನ್ನು ದಾಟಬೇಕಾಗಿತ್ತು. ನಸುಕಿನಲ್ಲಿ ವಾಹನ ಸಂಚಾರ ಕಡಿಮೆ ಎಂದರೂ ಕೂಡ ಸಂಚರಿಸುವ ವಾಹನಗಳ ವೇಗ ಯಮ ಸದೃಶ್ಯವಾಗಿರುತ್ತದೆ. ಅವುಗಳ ವೇಗ ಕಣ್ಣೆದುರು ವಿಮಾನ ಹಾರಿದಂತಿರುತ್ತದೆ. ಏನೂ ಇಲ್ಲ ಎಂದು ನಾಲ್ಕು ಹೆಜ್ಜೆ ಮುಂದೆ ಹೋದರೆ, ಶೂನ್ಯದಿಂದ ಪ್ರತ್ಯಕ್ಷವಾದಂತೆ ವಾಹನಗಳು ಎದೆಗೆ ಸವರಿಕೊಂಡೇ ಹೋಗಿ ಬಿಡುತ್ತವೆ. ಪ್ರತಿ ದಿನವೂ ಮರಿಯಪ್ಪನಿಗೆ ಈ ಹಾದಿ ದಾಟುವುದೆಂದರೆ ಸಮುದ್ರ ದಾಟಿದಂತಾಗಿತ್ತು. ಆ ಕಡೆ ಈ ಕಡೆ ಎಚ್ಚರದಿಂದ ನೋಡುತ್ತ, ತನ್ನ ಜೊತೆ ಸಾಗದ ಕಾಲುಗಳನ್ನು ಎಳೆಯುತ್ತಾ, ಚಲಿಸುತ್ತಿರುವ ರೈಲನ್ನು ಹತ್ತಿದಂತೆ ಕಷ್ಟ ಪಡಬೇಕಾಗಿತ್ತು. ಮರಿಯಪ್ಪನಿಗೆ ಇದು ಪ್ರತಿದಿನದ ಪರೀಕ್ಷೆಯಾಗಿತ್ತು. ಹಾಗೂ ಹೀಗೂ ದೊಡ್ಡರಸ್ತೆಯನ್ನು ದಾಟಿ ಆರ್.ವಿ.ಎನ್. ಗೇಟು ತಲುಪುತ್ತಿದ್ದ.



ಈ ದಿನ ವಾತಾವರಣ ತಂಪಾಗಿತ್ತು. ನಸುಕಿನ ಆ ಗಾಳಿಯಲ್ಲಿ ಜೋಗುಳ ಕೇಳುತ್ತಿತ್ತು. ಗೋಣು ಎತ್ತಿ ಆಕಾಶದತ್ತ ನೋಡಿದಾಗ ಉಳಿದ ಚಿಕ್ಕೆಗಳು, ಕಣ್ಣು ತೋರಿಸಿ ಅಳುಕಿ ಹೋಗುವ ತಯಾರಿಯಲ್ಲಿದ್ದವು. ಮೂಡಣದಲ್ಲಿ ಬೆಳಗಿನ ಓಕಳಿಯ ಸೂಚನೆ ಕಾಣಹತ್ತಿತ್ತು. ಸೂರ್ಯ ತೆರೆದ ಒಲೆಯಲಿಟ್ಟ ರೊಟ್ಟಿಯಂತಾಗಿದ್ದ.